ಹೇಳುವುದ ತಡವಾಗಿ ಅವರು ಉತ್ತರ ಕೊಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಗೃಹ ಸಚಿವರು ಬಂದ ನಂತರ ಕೂಡಲೇ ಹೇಳಿಕೆ ಕೊಡಿಸುತ್ತೇನೆ ಎಂದು ಭರವಸೆಯನ್ನು ಈ ಸದನಕ್ಕೆ ಕೊಟ್ಟಿದ್ದರು. ನಾವು ತಮ್ಮನ್ನು ಏತಕ್ಕೆ ಕೇಳುತ್ತಿದ್ದೇವೆ ಎಂದರೆ ಇಷ್ಟು ನಿಧಾನ ಆದಮೇಲೆ ಅಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿರುವಾಗ ಮಾನ್ಯ ಗೃಹ ಸಚಿವರು ಮೂರು ದಿನ ಆದಮೇಲೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ. ಈ ಸದನವನ್ನು ಮೊದಲೇ ವಿಶ್ವಾಸಕ್ಕೆ ತೆಗೆದುಕೊಂಡು ಕೂಡಲೇ ಬಂದು ಅವರು ಹೇಳಿಕೆ ಮಾಡಬೇಕಾಗಿತ್ತು. ಹುಬ್ಬಳ್ಳಿಯಿಂದ ಬಂದ ನಂತರ ತಕ್ಷಣವೇ ಅವರು ಈ ಸದನಕ್ಕೆ ಹೇಳಿ ನಾನು ಒಂದು ಹೇಳಿಕೆ ಕೊಡುತ್ತಿದ್ದೇನೆ, ದಯಮಾಡಿ ಇದನ್ನು ಸ್ವೀಕರಿಸಬೇಕು ಎಂದು ತಮಗೆ ಹೇಳಬೇಕಾಗಿತ್ತು ಸ್ವಾಮಿ. ಅದೇನೂ ಹೇಳಲಿಲ್ಲ. ನಮ್ಮ ಒಂದು ಒತ್ತಾಯದ ಮೇಲೆ ಅವರು ಇವತ್ತು ಹೇಳಿಕೆ ಕೊಡುವುದಕ್ಕೆ ಬಂದಿದ್ದಾರೆ. ಅವರೇ ನೇರವಾಗಿ ಹೇಳಿಕೆ ಕೊಡಬೇಕಾಗಿತ್ತು. ಆದ್ದರಿಂದ ತಮಗೆ ನಾನು ಏನು ಹೇಳುತ್ತಿದ್ದೇನೆ ಅಂದರೆ ಇಲ್ಲಿ ಗೃಹ ಸಚಿವರಿದ್ದಾರೆ. ಅಲ್ಲಿ ಇನ್ನೂ ಗಂಭೀರವಾದ ಪರಿಸ್ಥಿತಿ ಇದೆ. 144ನೇ ಸೆಕ್ಷನ್ ಇದೆ. ಶಾಂತವಾಗದೇ ಇರುವ ಪರಿಸ್ಥಿತಿ ಇರುವಾಗ ಮಾನ್ಯ ಗೃಹ ಸಚಿವರು ಇಷ್ಟು ನಿಧಾನವಾಗಿ ಈ ಸದನಕ್ಕೆ ಮಾಹಿತಿಯನ್ನು ಕೊಡತಕ್ಕದ್ದು ಸರಿಯಿಲ್ಲ ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :- ಅವರು ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಈಗ ತಾನೇ ನನಗೆ ಬಂದಿರುವ ಸುದ್ದಿ ಪ್ರಕಾರ ನಿನ್ನೆ ರಾತ್ರಿ ಬಿ.ಜೆ.ಪಿ. ಶಾಸಕರಾದ ಶ್ರೀ ಅಶೋಕ್ ಕಾಟ್ಟೆ ಅವರ ಮನೆಯ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಇಲ್ಲಿಯವರೆಗೆ ಸುಮಾರು 35 ಜನ ಗಾಯಾಳುಗಳು ಕೆ.ಎಂ.ಸಿ. ಆಸ್ಪತ್ರೆಯಲ್ಲಿದ್ದಾರೆ. ಬಹಳ ಪ್ರಮುಖವಾದಂಥ ಕ್ಷೇತ್ರ; ಇಲ್ಲಿ ಆಗಾಗ ಗಲಭೆಗಳಾಗುತ್ತಿರುತ್ತದೆ. ಆ ರೀತಿ ಪ್ರದೇಶಗಳಾದ ಕಮರೀಪೇಟೆ, ಕಂಚುಗಾರರ ಓಣಿ, ಗಣೇಶ್ ಪೇಟೆ, ಬೆಳಗಾಂ ಗಲ್ಲಿ, ಮೇದಾರ್ ಓಣಿ, ಮರಾಠಾ ಗಲ್ಲಿ, ಬ್ಯಾಡಿ ಓಣಿ, ಅರಳೇಕಟ್ಟೆ ಓಣಿ, ಹಂಸಾರ ವಟ್ಟಾ, ಚನ್ನಪೇಟೆ, ಹಳೇ ಹುಬ್ಬಳ್ಳಿ ರಸ್ತೆ ಇಲ್ಲಿ ಯಾವುದೇ ಪೋಲೀಸ್ ಬಂದೋಬಸ್ತ್ ಮಾಡಿಲ್ಲ. ಅಂದರೆ ನಿರಂತರವಾಗಿ ಕಳೆದ ಮೂರು ನಾಲ್ಕು ದಿವಸಗಳಿಂದ ಘಲಬೆಗಳು ನಡೆಯತ್ತಿವೆ. ನಾನು ಹೋಮ್ ಮಿನಿಸ್ಟರ್ ಹತ್ತಿರ ಪರ್ಸನಲ್ಲಾಗಿ ಮಾತನಾಡಿದ್ದೇನೆ. ಮುಖ್ಯ ಮಂತ್ರಿಗಳ ಹತ್ತಿರವೂ ಬೆಳಿಗ್ಗೆ ನಾನು ದೂರವಾಣಿಯಲ್ಲಿ ಮಾತನಾಡಿದ್ದೇನೆ. ಎರಡು ಸಂಗತಿ ನಾನು ತಮ್ಮಲ್ಲಿ ವಿನಂತಿ ಮಾಡುವುದು. ಇಲ್ಲಿ ಏನಾದರೂ ಮಾಡಿ ಶಾಂತ ಪರಿಸ್ಥಿತಿಯನ್ನು ತರಬೇಕಾಗಿದೆ. ಅಲ್ಲಿ ಸೂಕ್ತವಾದಂಥ ಪೋಲೀಸ್ ಬಂದೋಬಸ್ತ್ ಎಲ್ಲಿ ಈ ರೀತಿಯಾದ ಸೂಕ್ಷ್ಮವಾದ ಪ್ರದೇಶ ಇರುತ್ತದೋ ಅಲ್ಲಿ ಹಾಕಬೇಕಾಗಿತ್ತು. ನಾನು ಹೇಳುತ್ತಿಲ್ಲ. ಹೋಮ್ ಮಿನಿಸ್ಟರ್ ಹೋಗಿ ಬಂದಿದ್ದಾರೆ. ಅಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ನೋಡಿದರೆ, ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಅದನ್ನು ಹೇಳಿ. ಅದಕ್ಕಿಂತ ಬಹಳ ಪ್ರಮುಖವಾಗಿರತಕ್ಕದ್ದು ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಘಟನೆಗಳನು ನಿರಂತರವಾಗಿ ನಡೆಯುತ್ತಿವೆ. ಆವತ್ತು ಒಂದು ದಿನ ಪ್ರಾರಂಭವಾಯಿತು ಯಡಿಯೂರಪ್ಪನವರೇ, ಚೂರಿ ಹಾಕಿದರು

ಯಾರೋ ಸತ್ತರು, ವ್ಯತ್ಯಾಸ ಆಗಿದೆ ಅಂದರೆ, ಆಯಿತು ಈ ತರಹ ಘಟನೆಗಳು ಆಗುತ್ತವೆ. ಆದರೆ ನೀವು ಹೋಗಿ ಬಂದ ಮೇಲೂ ಸಹ ಬಂದೋಬಸ್ತ್ ಮಾಡಿದ ಮೇಲೂ ಸಹ ಅಲ್ಲಿ ನಿರಂತರವಾಗಿ ಪ್ರತಿ ದಿವಸ ನಡೆಯತ್ತಿದೆ ಎಂದರೆ ಬಹುಶ: ಸೂಕ್ತವಾದಂಥ ಬಿಗಿ ಬಂದೋಬಸ್ತ್ ಮಾಡಲಿಲ್ಲ ಎಂದು ಆಗುತ್ತದೆ. ನಮ್ಮ ಶಾಸಕರು, ಅಶೋಕ್ ಕಾಟ್ಟೆ ಇರಬಹುದು ಮತ್ತೊಬ್ಬರು ಇರಬಹುದು ಹುಬ್ಬಳ್ಳಿ ಶಾಸಕರು, ಯಾರೂ ಸಹ ಈ ಸದನದಲ್ಲಿರದೆ ಅಲ್ಲೇ ಕುಳಿತುಕೊಂಡು ಶಾಂತಿ ಸುವ್ಯವಸ್ಥೆ ತರುವುದಕ್ಕೋಸ್ಕರ ಅವರು ಒದ್ದಾಡುತ್ತಿದ್ದಾರೆ. ಹೋಮ್ ಮಿನಿಸ್ಟರ್ ಅವರನ್ನು ಭೇಟಿ ಮಾಡಿದ್ದಾರೆ. ಹೋಮ್ ಮಿನಿಸ್ಟರ್ ಭೇಟಿ ಆದ ಮೇಲೂ ಸಹ ಅಲ್ಲಿ ಸರಿಯಾದ ಬಂದೋಬಸ್ತ್ ಮಾಡಿರುವುದಿಲ್ಲ, ಅಲ್ಲಿ ನಮ್ಮ ಶಾಸಕರು ಧರಣಿ ಕುಳಿತುಕೊಂಡು ನಮಗೆ ರಕ್ಷಣೆ ಕೊಡಿ ಜನರಿಗೆ ಎಂದು ಕೇಳುವಂಥ ಪರಿಸ್ಥಿತಿ ಬರುತ್ತಾ ಇರುವುದು ಸರಿಯಲ್ಲ. ಅದಕ್ಕೋಸ್ಕರ ದಯಮಾಡಿ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಂತೆ ಈ ಮನೆಯನ್ನು ವಿಶ್ವಾಸಕ್ಕೆತೆಗೆದುಕೊಳ್ಳಬೇಕಲ್ಲಾ. ತಾವು ಹೋಗಿ ಬಂದ ತಕ್ಷಣ ಇಪತ್ತು ಇಲ್ಲಿ ಬಂದು ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತಲ್ಲವೇ ?

ಉಪಾಧ್ಯಕ್ಷರು :- ಈಗ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ವಿಚಾರ. ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೆಕ್ಕುಚ್ಚುತಿ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ಒಂದೇ ಒಂದು ವಿವರಣೆಯನ್ನು ಕೊಟ್ಟು ನನ್ನ ಹೇಳಿಕೆಗೆ ನಾನು ಬರುತ್ತಿದ್ದೇನೆ. ಸ್ವಾಮಿ ಮಾನ್ಯ ಮುಖ್ಯ ಮಂತ್ರಿಗಳು ಘಟನೆ ನಡೆದಂತಹದ್ದು 1-30 - 2-00 ಗಂಟೆ ಇರಬಹುದು 21ನೇ ತಾರೀಖು. ನನಗೆ ಸೂಚನೆ ಕೊಟ್ಟರು 2.00 - 2.30 ಗಂಟೆಯಲ್ಲಿ ತಾವೂ ಮತ್ತು ಡಿ.ಜಿ.ಪಿ.ಯವರು ಹೆಲಿಕಾಪ್ಟರ್ ಮೂಲಕ ಹುಬ್ಬಳ್ಳಿಗೆ ಹೋಗಬೇಕು. ಪರಿಸ್ಥಿತಿಯನ್ನು ನೋಡಿ ಅಲ್ಲಿ ಸರ್ಕಾರದಿಂದ ಮಾಡುವಂತಹದ್ದು ಏನಿದೆ ಪೋಲೀಸ್ ಅಧಿಕಾರಿಗಳು ಏನು ಮಾಡಬಹುದು ಎಂದು ತಿಳಿದು ನನಗೆ ವರದಿ ಕೊಡಬೇಕು ಎನ್ನತಕ್ಕ ಮಾತನ್ನು ಹೇಳಿದರು. ನಾನು 21ನೇ ತಾರೀಖು 6.30 ಗಂಟೆಗೆ ಘಟನೆ ನಡೆದ 4.30 ಗಂಟೆಯೊಳಗೆ ರಾಜ್ಯದ ಪೋಲೀಸ್ ಇಲಾಖೆಯ ಮುಖ್ಯಸ್ಥರಾದ ಶ್ರೀ ರಾಮಲಿಂಗಂರವರು, ಮತ್ತೊಬ್ಬ ಹಿರಿಯ ಅಧಿಕಾರಿಗಳಾದ ಶ್ರೀ ಬರ್ಮನ್ ರವರು ಹಾಗೂ ಗೃಹ ಮಂತ್ರಿಗಳು ನಾವು 6.30 ಗಂಟೆಗೆ ಅಲ್ಲಿಗೆ ಹೋಗಿದ್ದೇವೆ. 22ನೇ ತಾರೀಖು ಸಾಯಂಕಾಲದವರೆಗೂ ನಾನು ಅಲ್ಲಿಯೇ ಇದ್ದೆ. ಇರಬೇಕಾದ ಸನ್ನಿವೇಶ ಒದಗಿ ಬಂತು. ಮುಖ್ಯ ಮಂತ್ರಿಗಳ ಆದೇಶ ಕೂಡ ಇತ್ತು. ನಾನು ಸಭಾಧ್ಯಕ್ಷರಿಗೂ ತಿಳಿಸಿದ್ದೇನೆ. ವಿಧಾನ ಪರಿಷತ್ತಿನ ಅಧ್ಯಕ್ಷರಿಗೂ ಈ ವಿಚಾರವನ್ನು ತಿಳಿಸಿದ್ದೇನೆ. 22ನೇ ತಾರೀಖು ಸಾಯಂಕಾಲ 7.30 - 8.00 ಗಂಟೆಯಾಯಿತು ನಾನು ತಲುಪುವ ಹೊತ್ತಿಗೆ. ಅವತ್ತೇ ನಾನು ಹೇಳಿಕೆಯನ್ನು ಕೊಡಬೇಕು ಎಂದು ಬಂದೆ. ಅಷ್ಟರೊಳಗೆ ಸಭೆಯನ್ನು ಮುಂದಕ್ಕೆ ಹಾಕಿದ್ದರು. 23ನೇ ತಾರೀಖು ಶ್ರೀಮಾನ್ ವಾಟಾಳ್ ನಾಗರಾಜ್ ರವರೇ ಹೇಳಿ, ನನ್ನ ಹೇಳಿಕೆಯನ್ನು

ಕೊಡಬೇಕು ಎಂದು ಇದ್ದೆ. ಆದರೆ ಆ ದಿವಸ ಬಜೆಟ್ ಮಂಡನೆಯಾಯಿತು. ಅದು ಆದ ನಂತರ ಸಭೆಯ ಕಾರ್ಯಕಲಾಪಗಳು ಸ್ವಲ್ಪ ಬೇರೆ ರೀತಿಯಲ್ಲಿ ಹೋದದ್ದು ತಮಗೆಲ್ಲರಿಗೂ ತಿಳಿದಿರತಕ್ಕ ವಿಚಾರ. ಯಾವುದೇ ಕಾರಣದಿಂದ ಸಹಿತ ಈ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇರತಕ್ಕ ನನಗೆ ಈ ಸಭೆಗೆ ಅಗೌರವ ಮಾಡಬೇಕು, ಮತ್ತೊಂದು ಮಾಡಬೇಕು ಎನ್ನತಕ್ಕಂತಹದ್ದು ನನಗಾಗಲೀ ನಮ್ಮ ಸರ್ಕಾರಕ್ಕಾಗಲೀ ಯಾವುದೂ ಸಹಿತ ಇಲ್ಲ. ಯಾರಿಗೂ ಇಲ್ಲ. ನಿನ್ನೆ ಶೂನ್ಯ ವೇಳೆಯಲ್ಲಿ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ನಾನು ಅಲ್ಲೆ ಇದ್ದೆ. ಏನು ಆಗಿದೆ ಎಂದು ತಿಳಿದುಕೊಳ್ಳತಕ್ಕ ಕಾಳಜಿ ಸ್ವತ: ಅವರಿಗೆ ಇದ್ದೇ ಇರುತ್ತದೆ. ಅವರು ಹುಬ್ಬಳ್ಳಿಯವರು. ಶಾಂತಿಯನ್ನು ತರಲು ಅವರು ಸಹಕಾರವನ್ನು ಕೊಟ್ಟಂತಹವರು. ಮತ್ತು ಅನೇಕ ಸದಸ್ಯರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಅದರಿಂದಾಗಿ ನಡೆದ ಘಟನಾವಳಿಗಳ ಬಗ್ಗೆ ವಿವರಣೆಯನ್ನು ನಾನು ಆ ಸಭೆಯಲ್ಲಿಟ್ಟಿದ್ದೇನೆ.

ಶ್ರೀ ಎಸ್.ಬಂಗಾರಪ್ಪ :- ನಿಮ್ಮದೇನೂ ಹಕ್ಕೆ ಇಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಅವತ್ತೂ ಸಹಿತ ವಿರೋಧ ಪಕ್ಷದ ನಾಯಕರು ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದರು. ನಾನು ವಿಧಾನ ಪರಿಷತ್ತಿನಲ್ಲಿ ಆ ಸಂದರ್ಭದಲ್ಲಿ ಇದ್ದೆ. ಇದ್ದೂ ನಾನು ಸುಮ್ಮನೆ ಹೇಗೆ ಇರುವುದಕ್ಕಾಗುತ್ತದೆ ? ಇಲ್ಲ ಇಲ್ಲ ವಿಧಾನ ಸಭೆಯಲ್ಲಿ ಮುಂಚೆ ಮಾಡಬೇಕು. ವಿಧಾನ ಪರಿಷತ್ತಿನಲ್ಲಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಇಕ್ಕಟ್ಟಿನ್ನೂ ತಂದ ಹಾಗೆ ಆಗುತ್ತದೆ. ಒಂದು ಕೆಟ್ಟ ಸಂಪ್ರದಾಯವಾಗುತ್ತದೆ. ಅದರಿಂದಾಗದ ನಮ್ಮ ಪೀಠದ ಬಗ್ಗೆ ತಮ್ಮ ಬಗ್ಗೆ ಬಹಳ ಗೌರವ ಇದೆ.

ಶ್ರೀ ವಾಟಾಳ್ ನಾಗರಾಜ್ :- ಈ ಸದನವನ್ನು ಕಡೆಗಣಿಸಿ ಅಲ್ಲಿ ಉತ್ತರವನ್ನು ಕೊಟ್ಟಿರುವುದಕ್ಕೆ ನಾನು ವಿರೋಧ ಮಾಡುತ್ತಿದ್ದೇನೆ ಎಂದು ಅಲ್ಲ. ಆದರೆ ಈ ಸದನಕ್ಕೆ ಮೊದಲು ಮಾಹಿತಿಯನ್ನು ಕೊಡಬೇಕಾದುದು ಮಾನ್ಯ ಗೃಹ ಮಂತ್ರಿಗಳ ಕರ್ತವ್ಯ. ಮಾನ್ಯ ಮುಖ್ಯ ಮಂತ್ರಿಗಳು ತಕ್ಷಣ ಕರೆಸಿಕೊಂಡು ಉತ್ತರ ಕೊಡಿಸುತ್ತೇನೆಂದು ಹೇಳಿದರು ಅವರು ಈ ಸದನದಲ್ಲಿ.

ಉಪಾಧ್ಯಕ್ಷರು :- ಅವರೇ ಹೇಳಬಹುದು. 22ನೇ ತಾರೀಖು ಸಾಯಂಕಾಲವಾಗಿತ್ತು. ಅವರು ಬರುವುದು. 23ನೇ ತಾರೀಖು ಬಜೆಟ್ ಮಂಡನೆಯಾಯಿತು. ನಿನ್ನೆ 24ನೇ ತಾರೀಖು.... ಗೊತ್ತಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ :- ನಿನ್ನೆ ಸಭೆಯೇ ನಡೆಯಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಸೈಮಲ್‌ಟೆನಿಯಸ್ಸಾಗಿ ಕೊಡಬೇಕಾಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಸೈಮಲ್ಟಿನಿಯಸ್ಸಾಗಿ ಹೇಗೆ ಆಗುತ್ತದೆ ಮಾನ್ಯ ಮುಖ್ಯ ಮಂತ್ರಿಗಳು ಮೊದಲೇ ಈ ಸದನಕ್ಕೆ ತಿಳಿಸಿದ್ದಾರೆ ಜ್ಯುಡಿಷಿಯಲ್ ಪ್ರೋಬ್ ಮಾಡುವ ಬಗ್ಗೆ. ತಪ್ಪಿತಸ್ಥರು ಯಾರು ಎಂದು ಕಂಡು ಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಕಂಡು ಬರುತ್ತದೆ. ಮುಂಚೆ ವಿಧಾನ ಸಭೆಗೆ ಹೇಳಿದ್ದಾರೆ. ಆದ್ದರಿಂದ ಈ ಎಲ್ಲಾ ಘಟನೆಗಳ ಬಗ್ಗೆ ವಿವರಿಸಿದ ಮೇಲೆ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಸಮಾಧಾನವಾಗಿದೆ ಎಂದು ತಿಳಿದು ನಡೆದ ಘಟನಾವಳಿಗಳ ಬಗ್ಗೆ 2 ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಖರ್ಗೆಯವರು ಅದೇ ಹೇಳಿಕೆಯನ್ನು ಇಲ್ಲ ಇಟ್ಟು ಹೋಗುತ್ತೀರೋ ಅಥವಾ ಏನಾದರೂ ಹೊಸದಾಗಿ ಹೇಳುತ್ತೀರೋ ಎಂದು ಕೇಳಿದ್ದಾರೆ. ಹೊಸದಾಗಿ ಏನನ್ನೂ ಹೇಳಬಾರದು ಎನ್ನತಕ್ಕಂಥದ್ದು ನನ್ನ ಆಸೆ. ಏಕೆಂದರೆ ಪರಿಸ್ಥಿತಿ ಮತ್ತಷ್ಟು ಶಾಂತಿ ಕದಡುವುದು ಎಲ್ಲವೂ ಸಹಿತ ನಮಗೆ ಬೇಕಾಗಿಲ್ಲ. ನಿಮಗೂ ಬೇಕಾಗಿಲ್ಲ. ಅದು ಬೇಕಾಗಿರತಕ್ಕಂಥದ್ದು ಬೇರೆಯವರಿಗೆ ಎನ್ನುವುದು ನಿಮಗೂ ಗೊತ್ತಿದೆ. ಆದ್ದರಿಂದ ನನ್ನ ಹೇಳಿಕೆಯನ್ನು ಸದನದ ಮುಂದೆ ಇಡುತ್ತಿದ್ದೇನೆ. ಅಂದರೆ ಸಮಾಜ ಘಾತುಕ ಶಕ್ತಿಗಳು ಎಂದು ನಾನು ಹೇಳಿದ್ದುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದರಲ್ಲಿ ನಾನು ತರಿಸಿಕೊಂಡು ನೋಡಿದ್ದೇನೆ. ಅಂಜುಮಾನ್ ಅಧ್ಯಕ್ಷರು ಕಾಳೆ ಗುಡ್ಡೆ ಮಾಡಿದ್ದಾರೆ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಪಾಯಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪಾಪ ಅವರನ್ನು ಅಟ್ಯಾಕ್ ಮಾಡಿರತಕ್ಕಂತಹದ್ದು, ಅವರ ಶಾಪನ್ನು ಲೂಟಿ ಮಾಡಿರತಕ್ಕಂತಹದ್ದು ಅದರ ಮಾಹಿತಿ ಕೂಡ ಅದರಲ್ಲಿ ಇಲ್ಲ. ಅದಕ್ಕೆ ನಾನು ಹೇಳಿದ್ದುದು ಹೊಸದಾಗಿ ಏನಾದರೂ ಹೇಳುತ್ತೀರೋ ಅಥವಾ ಇದ್ದದ್ದನ್ನೇ ಇಟ್ಟು ಬಿಟ್ಟು ಹೋಗುತ್ತೀರೋ ಎನ್ನತಕ್ಕಂಥದ್ದನ್ನು ನಾನು ಕೇಳಿದ್ದೇನೆ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ:- ಪಾಯಂಟ್ ಆಫ್ ಆರ್ಡರ್ ಏನೆಂದರೆ, ಶ್ರೀಮಾನ್ ಖರ್ಗೆಯವರು ಹೇಳಿದ್ದನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಮಾನ್ಯ ಗೃಹ ಮಂತ್ರಿಗಳು ಇಲ್ಲಿ ಸ್ಟೇಟ್‌ಮೆಂಟ್ ಮಾಡುವುದಕ್ಕಿಂತ ಮುಂಚಿತವಾಗಿ ಇವರ ಕೈಗೆ ಅದು ಹೇಗೆ ಬಂತು ? ನಾನು ತರಿಸಿಕೊಂಡು ನಾನು ನೋಡಿದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆ ಸದನದಲ್ಲಿ ಮಾಡಿದ ಸ್ಟೇಟ್‌ಮೆಂಟನ್ನು ತರಿಸಿಕೊಂಡು ನೋಡಿದ್ದೇನೆ ಎಂದು ಹೇಳಿದ್ದುದು.

ಉಪಾಧ್ಯಕ್ಷರು :- ಆ ಸದನದಲ್ಲಿ ಮಾಡಿದ ಸ್ಟೇಟ್‌ಮೆಂಟನ್ನು ತರಿಸಿಕೊಂಡು ನೋಡಿದೆ ಎಂದು ಹೇಳಿದ್ದಾರೆ.

ಶ್ರೀಮತಿ ಪ್ರಮೀಳಾ ಎಸ್.ನೇಸರ್ಗಿ :- ಹಾಗೆ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಆ ಸದನದಲ್ಲಿ ನೀಡಿದಂತಹ ಹೇಳಿಕೆಯನ್ನು ನೋಡಿ ಅವರು ಆ ರೀತಿ ಹೇಳಿದ್ದಾರೆ. ಜೊತೆಗೆ ಇವತ್ತಿನ ಪರಿಸ್ಥಿತಿ ಏನು ಇದೆ ಎಂಬುದನ್ನೂ ಹೇಳಬೇಕು ಎಂಬ ಸದಿಚ್ಛೆಯಿಂದ ಸ್ಟೇಟ್‌ಮೆಂಟನ್ನು ಮಾಡಬೇಕೆಂದು ತಾವು ಅವಕಾಶ ಕೊಟ್ಟಿರುವುದರಿಂದ ನಾನು ನಿಂತಿದ್ದೇನೆ. ಸ್ವಾಮಿ ದಿನಾಂಕ 21-3-1995ರಂದು ಮಧ್ಯಾಹ್ನ....

(ಈ ಹಂತದಲ್ಲಿ ಧ್ವನಿವರ್ಧಕ ವ್ಯವಸ್ಥೆ ಸಮರ್ಪಕವಾಗಿ ಕೆಲಸ ಮಾಡುತ್ತಿರಲಿಲ್ಲ)

ಶ್ರೀ ವಾಟಾಳ್ ನಾಗರಾಜ್:- ಈ ಧ್ವನಿವರ್ಧಕ ಮೊನ್ನೆಯಿಂದ ಏಕೆ ಈ ರೀತಿ ಆಗುತ್ತಿದೆ ?

ಶ್ರೀ ಹೆಚ್.ಡಿ.ದೇವೇಗೌಡ:- ಓವರ್ ಯೂಸ್ ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ :- ನಿಮ್ಮದು ಭಾಷಣ ಜಾಸ್ತಿಯಾಗಿರಬೇಕು. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಏನು ಇದು ? ಶಾಸನ ಸಭೆಯಲ್ಲೇ ಈ ಪರಿಸ್ಥಿತಿ ಆದರೆ ಈ ವಿದ್ಯುಚ್ಛಕ್ತಿಯ ಪರಿಸ್ಥಿತಿ ರಾಜ್ಯದಲ್ಲಿ ಏನು ?

ಉಪಾಧ್ಯಕ್ಷರು :- ಈಗ ಸಭೆಯನ್ನು ದಯಮಾಡಿ ಮುಂದೂಡಿ ಮಧ್ಯಾಹ್ನ 3-15ಕ್ಕೆ ಪುನ: ಸಮಾವೇಶಗೊಳ್ಳುತ್ತದೆ.

(ಸಭೆಯು 2-05 ಕ್ಕೆ ಎದ್ದು ಪುನ: ಮಧ್ಯಾಹ್ನ 3-35ಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(ಸದನವು ಪುನ: ಮಧ್ಯಾಹ್ನ 3-30 ಗಂಟೆಗೆ ಪ್ರಾರಂಭವಾಯಿತು)

ಉಪಾಧ್ಯಕ್ಷರಾದ (ಶ್ರೀ ಎಂ.ಎಸ್.ಪಾಟೀಲ್‌ರವರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ನಡೆದ ಅಹಿತಕರ ಘಟನೆ ಬಗ್ಗೆ ಹೇಳಿಕೆ ಕೊಡಲು ಮಂತ್ರಿಗಳು ಸದನದಲ್ಲಿಲ್ಲ. ಸದನ ಪ್ರಾರಂಭವಾದ ನಂತರ ಏನು ಮಾಡಬೇಕು ? ಸದನ ಪ್ರಾರಂಭವಾದ ನಂತರ ವಿಷಯದ ಪ್ರಸ್ತಾಪವಾಗಬೇಕಲ್ಲಾ, ಏನು ವಿಷಯ ತೆಗೆದುಕೊಳ್ಳುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ :- ಉಪಾಧ್ಯಕ್ಷರೇ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಸದನ ಸಾರ್ವಭೌಮತೆಯನ್ನು ಪಡೆದಿರತಕ್ಕಂಥಾದ್ದು. ಮೊದಲನೆಯದಾಗಿ, ಸದನದಲ್ಲಿರುವ ಧ್ವನಿವರ್ಧಕಗಳು

ಯದ್ವಾತದ್ವಾ ಕೆಡುತ್ತಿವೆ, ಇವನ್ನು ಯಾವ ರೀತಿ ಸರಿಪಡಿಸುತ್ತೀರಿ ? ಇದರ ವ್ಯವಸ್ಥೆ ನೋಡಿಕೊಳ್ಳುವವರು ಯಾರು ? ನಾನು ಬಹಳ ವರ್ಷಗಳಿಂದ ಈ ಸದನದಲ್ಲಿದ್ದೇನೆ, ಯಾವಾಗಲೂ ಇಂತಹ ಪರಿಸ್ಥಿತಿ ಬಂದಿರಲಿಲ್ಲ. ನಿನ್ನೆ ಈ ಪರಿಸ್ಥಿತಿ ಬಂದಿದೆ, ಇವೊತ್ತೂ ಸಹ ಬಂದಿದೆ. ಪರಿಸ್ಥಿತಿ ಏನಾಗಿದೆ ? ಎಂದು ಹೇಳುತ್ತೀರಾ ? ಶಾಸನ ಸಭೆಗೆ ಈ ಪರಿಸ್ಥಿತಿ ಬದಗಿದರೆ ಮುಂದೇನು ?

ಉಪಾಧ್ಯಕ್ಷರು :- ವಿದ್ಯುತ್ ತೊಂದರೆಯಿಂದ ಹೀಗಾಗಿದೆ. ಇದು ಕೇವಲ ವಿಧಾನ ಸಭೆಗಷ್ಟೆ ಅಲ್ಲ, ಇಡೀ ಬೆಂಗಳೂರು ನಗರದಲ್ಲೇ ವಿದ್ಯುತ್ತಿನ ಅಭಾವವಿದೆ. ಆದುದರಿಂದ, ತೊಂದರೆಯಾಗಿದೆಯೇ ವಿನಾ ಬೇರೆ ಯಾವ ಕಾರಣವೂ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಬೆಳಕಿನ ವ್ಯವಸ್ಥೆ ಇತ್ತು, ಆದರೆ, ಧ್ವನಿವರ್ಧಕ ಕೆಟ್ಟಿತ್ತಲ್ಲ.

ಉಪಾಧ್ಯಕ್ಷರು :- ಇದು ಲೋ ವೋಲ್ಟೇಜ್‌ನಿಂದ ಆಗಿರತಕ್ಕಂಥಾದ್ದು.

ಶ್ರೀ ವಾಟಾಳ್ ನಾಗರಾಜ್ :- ಇಡೀ ಬೆಂಗಳೂರು ನಗರದಲ್ಲಿ ಲೋ ವೋಲ್ಟೇಜ್ ಇದೆಯೇ ?

ಉಪಾಧ್ಯಕ್ಷರು :- ಇಲ್ಲಿ ಮಾತ್ರ ಹಾಗೆ ಆಗಿದೆ.

ಶ್ರೀ ವಾಟಾಳ್ ನಾಗರಾಜ್ :- ಸದನ ನಡೆಯುವಾಗದ ವಿದ್ಯುಚ್ಛಕ್ತಿ ಪೂರೈಕೆ ನಿಂತರೆ ಜನರೇಟರ್ ವ್ಯವಸ್ಥೆಯಿಟ್ಟುಕೊಂಡು ಅದರಿಂದ ವಿದ್ಯುತ್ ಪೂರೈಕೆ ಮಾಡಬೇಕು. ಜನರೇಟರ್ ಸಹ ಇಲ್ಲವೆಂದರೆ ಈ ಕೆಲಸವನ್ನು ಯಾವುದೋ ಒಂದು ತಾಲ್ಲೂಕು ಮಟ್ಟದ ಪಂಚಾಯಿತಿ ವ್ಯವಸ್ಥೆಗೆ ಇಳಿಸುತ್ತಿದ್ದೀರಾ ? ಹಳ್ಳಿಯ ಮಟ್ಟದಲ್ಲೂ ಸಹ ಈ ತರಹ ವ್ಯವಸ್ಥೆಯಲ್ಲಿ ಸಭೆ ನಡೆಯುವುದಿಲ್ಲ. ಈ ಸಭೆಗೆ ಮಹತ್ತರವಾದಂಥ ವಿಶೇಷತೆ ಇದೆ, ಇದು ರಾಜ್ಯವನ್ನು ಪ್ರತಿನಿಧಿಸತಕ್ಕಂಥ ಪರಮೋಚ್ಚ ಸಭೆಯಾಗಿದೆ. ಅಲ್ಲಿಯೇ ಈ ಪರಿಸ್ಥಿತಿಯುಂಟಾದರೆ....

ಉಪಾಧ್ಯಕ್ಷರು :- ತಮ್ಮ ಸಲಹೆ ಬಹಳ ಯೋಗ್ಯವಾದುದಾಗಿದೆ. ಇಲ್ಲಿ ಜನರೇಟರ್ ವ್ಯವಸ್ಥೆಯಿದ್ದು, ಕಾರ್ಯನಿರ್ವಹಿಸುತ್ತಿದೆ. ಲೋ ವೋಲ್ಟೇಜ್‌ನಿಂದ ಕೆಲವು ತೊಂದರೆಗಳುಂಟಾಗುತ್ತವೆ. ತಾವು ಕೊಟ್ಟ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಸಾಮಾನ್ಯವಾದ ಹೋಟೆಲುಗಳಲ್ಲಿಯೂ ಜನರೇಟರ್ ತಂದಿಟ್ಟುಕೊಂಡಿರುತ್ತಾರೆ. ಈ ಸದನದಲ್ಲಿ ಸಭೆ ನಡೆಯುತ್ತಿದ್ದಂಥ ಸಮಯದಲ್ಲಿ ಏನೇ ಬದಲಾವಣೆಯಾದರೂ ಕೂಡ ಒಂದು ನಿಮಿಷವೂ ಕಲಾಪ ನಿಲ್ಲಬಾರದು, ವಿದ್ಯುಚ್ಛಕ್ತಿನ ಪೂರೈಕೆ ನಿಂತ ತಕ್ಷಣದಿಂದಲೇ ಜನರೇಟರ್‌ನಿಂದ ವಿದ್ಯುತ್ ಪೂರೈಕೆ ಮಾಡಬೇಕು. ಸದನದ ಕಲಾಪ ಮಾತ್ರ ಯಾವುದೇ ಕಾಲದಲ್ಲಿ

ನಿಲ್ಲಬಾರದು. ಈ ರೀತಿಯಾದರೆ ಇದು ರಾಜ್ಯಕ್ಕೆ ತೋರಿಸುವ ಅಗೌರವ, ಜನತಾ ಪ್ರತಿನಿಧಿಗಳಿಗೆ ತೋರಿಸುವ ಅಗೌರವ, ಹೀಗಾದರೆ ಸದನದ ಪರಿಸ್ಥಿತಿ ಏನಾಗಬೇಕು ? ಇದರ ಬಗ್ಗೆ ಗಮನಹರಿಸಬೇಕಾದದ್ದು ತಮ್ಮ ಕರ್ತವ್ಯವೆಂದು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ :- ಜನರೇಟರ್ ವ್ಯವಸ್ಥೆ ಒಂದೇ ಅಲ್ಲ. Inverter ಎಂಬುದು ಇದೆ. Automatically it switch off. ಅದನ್ನು ಸಹ ದಯವಿಟ್ಟು ಹಾಕಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಈಗ ನನ್ನ ಪ್ರಶ್ನೆಗೆ ಉತ್ತರ ಕೊಡುವ ಮಂತ್ರಿಗಳು ಯಾರಾದರೂ ಇದ್ದರೆ ದಯಮಾಡಿ ಅವರನ್ನು ಕರೆಯಿಸಿ.

ಶ್ರೀ ಸಿದ್ದರಾಮಯ್ಯ :- ಈ ಸದನಕ್ಕೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸತಕ್ಕಂಥವರು ಸಭಾಧ್ಯಕ್ಷರು ಮತ್ತು ಉಪಾಧ್ಯಕ್ಷರು. ಆದುದರಿಂದ, ಇಲ್ಲಿ ವಿದ್ಯುಚ್ಛಕ್ತಿ ಹೋಗದ ರೀತಿಯಲ್ಲಿ ನೋಡಿಕೊಳ್ಳುವ ವ್ಯವಸ್ಥೆ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಹಾಗಾದರೆ, ತಮಗೆ ಸಂಬಂಧಪಟ್ಟದನ್ನೇ ನಾನು ಕೇಳುತ್ತಿದ್ದೇನೆ. ನಿನ್ನೆ ವಿದ್ಯುತ್ ಕೆಟ್ಟಿತ್ತು, ಏನಾಯಿತು ? ಸಭೆಯನ್ನು ಮುಂದಕ್ಕೆ ಹಾಕಿದಿರಿ....

ಉಪಾಧ್ಯಕ್ಷರು :- ವಿದ್ಯುಚ್ಛಕ್ತಿ ಸಮಸ್ಯೆ ಕೇವಲ ಇಲ್ಲಿಗೆ ಮಾತ್ರ ಬಂದಿರತಕ್ಕದಲ್ಲ, ಇಡೀ ಬೆಂಗಳೂರು ನಗರದಲ್ಲಿ ವಿದ್ಯುತ್ ಶೆಟ್‌ಡೌನ್ ಆಗಿರುವುದರಿಂದ ತೊಂದರೆಯಾಗಿದೆ, ಮೈಕ್‌ಸೆಟ್‌ನಲ್ಲಿ ನಿನ್ನೆಯಿಂದ ತೊಂದರೆ ಕಾಣಿಸಿಕೊಂಡಿದೆ.

ಶ್ರೀ ವಾಟಾಳ್ ನಾಗರಾಜ್ :- ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ತಮ್ಮಿಂದ ಹಾರಿಕೆಯ ಉತ್ತರ ಬೇಡ, ಹೆಮ್ಮರವಾದ ಸರ್ಕಾರವಿರುವಾಗ ಒಂದು ಜನರೇಟರನ್ನು ತರಿಸಿಕೊಳ್ಳಲು ಆಗುವುದಿಲ್ಲವೇ ?

ಉಪಾಧ್ಯಕ್ಷರು :- ತಾವು ಹೇಳಿರುವ ವಿಚಾರ ಮಹತ್ವವಾಗಿದೆ. ಈಗ ಆಗಿರುವ ತೊಂದರೆಗೆ ನಾನು ವಿಷಾದಿಸುತ್ತೇನೆ. ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಿ ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ. ಈಗ ಮಾನ್ಯ ಗೃಹ ಮಂತ್ರಿಗಳು ಹುಬ್ಬಳ್ಳಿಯ ಘಟನೆಯ ಬಗ್ಗೆ ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಆನಂತರ, ಈ ಸದನದ ಎರಡೂ ಮೂಲೆಗಳಲ್ಲಿ ಇಟ್ಟಿರುವ ಗಿಡಗಳ ಡಬ್ಬಗಳನ್ನು ತೆಗೆಸಬೇಕು. ಅದು ಚೆನ್ನಾಗಿ ಕಾಣಿಸುವುದಿಲ್ಲ. ಈ ವ್ಯವಸ್ಥೆ ಶೋಭೆ ತರುವುದಿಲ್ಲ. ಇದು ಒಂದು ಸುಂದರವಾದ ಸಭಾ ಭವನ.